<u>ದಿನಾಂಕ **19.09.2024** ರಂದು ಸಾಕ್ಷಿಯನ್ನು ಕರೆಯಿಸಿ, ಪ್ರಮಾಣ ವಚನ ಬೋಧಿಸಲಾಯಿತು.</u>

<u>ಪಾಟೀ ಸವಾಲುಃ ಪ್ರತಿವಾದಿ 4 ಪರ ಶ್ರೀ ವಿ ಎಸ್ ಆರ್ ವಕೀಲರಿಂದಃ</u>

ವಕೀಲರಿಗೆ ದಾವಾ ಹಾಕಲು ನಾನೇ ಮಾಹಿತಿ ನೀಡಿದ್ದೇನೆ. ನನ್ನ ತಂದೆ 2009 ರಲ್ಲಿ ಕಾಲಧೀನರಾಗಿರುತ್ತಾರೆ. ನನ್ನ ತಾಯಿ ತೀರಿಕೊಂಡು 5 ವರ್ಷ ಆಗಿರುತ್ತದೆ. ನಮಗೆ ಇಂಗ್ಲೀಷ್ ಓದಲು ಬರೆಯಲು ಬರುವುದಿಲ್ಲ. ದಾವಾ ಅಂಶಗಳನ್ನು ಕೇಳಿ ತಿಳಿದುಕೊಂಡಿದ್ದೇನೆ. ನನ್ನ ತಂದೆ ತೀರಿಕೊಂಡ ನಂತರ ಖಾತಾ ಬದಲಾಣೆಗಾಗಿ ನನ್ನ ಸಹೋದರರು ತಹಶೀಲ್ದಾರ್ ರವರ ಕಛೇರಿಗೆ ಅರ್ಜಿ ಕೊಟ್ಟಿದ್ದರು ಎಂದರೆ ನಿಜ. ಇದಕ್ಕೆ ತಕಾರರು ಹಾಕಿದೇ ಎಂದರೆ ನಿಜ. ಈ ಪ್ರಕರಣದ ಬಗ್ಗೆ ತಹಶೀಲ್ದಾರ್ ರವರು ಕೊಟ್ಟ ನೋಟೀಸ್ ಅನ್ನು ತೋರಿಸಿದಾಗ ಸಾಕ್ಷಿಯು ಒಪ್ಪುತ್ತಾರೆ. ಸದರಿ ನೋಟೀಸ್ ಅನ್ನು ನಿಡಿ-1 ಎಂದು ಗುರುತಿಸಲಾಯಿತು. ತಹಶೀಲ್ದಾರ್ ರವರು ಖಾತಾ ಬದಲಾವಣೆ ಗಾಗಿ ಆದೇಶ ಮಾಡಿದ್ದಾರೆ ಎಂದರೆ ಸುಳ್ಳು. ತಹಶೀಲ್ದಾರ್ ರವರ ಆದೇಶದಂತೆ 30 ಗುಂಟೆ ನನ್ನ ಹೆಸರಿಗೆ ಆಗಿದೆ ಎಂದರೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು 6 ತಿಂಗಳ ನಂತರ ಗೊತ್ತಾಯಿತು ಎಂದು ಹೇಳುತ್ತಾರೆ.

ನಮ್ಮ ಊರಿನಲ್ಲಿ ಪ್ರಾರ್ಥಮಿಕ ಕೃಷಿ ಕೇಂದ್ರ ಇದೆ. ಈ ಬ್ಯಾಂಕ್ ನಲ್ಲಿ ನಮ್ಮ ಊರಿನವರು ಸಾಲ ಪಡಿಯುತ್ತಾರೆ ಎಂದರೆ ನಿಜ. ಅದೇ ರೀತಿ ನಾನು ಪಹಣಿಯನ್ನು ನೀಡಿ ಈ ಬ್ಯಾಂಕ್ ನಲ್ಲಿ ರೂ.60,000/- ಸಾಲ ಪಡೆದಿದ್ದೇನೆ ಎಂದರೆ ನಿಜ. ವಕೀಲರು ತೋರಿಸಿದ ಪಹಣಿಯಲ್ಲಿ ಸಾಲ ನಮೂದು ಆಗಿದೆ ಎಂದರೆ ಸಾಕ್ಷಿ ಒಪ್ಪುತ್ತಾರೆ. ಸದರಿ ಪಹಣಿಯನ್ನು ನಿಡಿ-2 ಎಂದು ಗುರುತಿಸಲಾಯಿತು. ದಿನಾಂಕಃ14.06.2014 ರಲ್ಲಿ ನಮ್ಮ ನಡುವೆ ವಿಭಾಗ ಆಗಿದೆ ಎಂದರೆ ಸುಳ್ಳು. ಎಲ್ಲಾ ಸಹೋದರರು ಮದುವೆಯಾಗಿ ಮಕ್ಕಳು ಇದ್ದರೆ ಎಂದರೆ ನಿಜ. ಅದೇ ರೀತಿ ನನ್ನ ಸಹೋದರಿಯರು ಮದುವೆಯಾಗಿ ಗಂಡನ ಮನೆಯಲ್ಲಿ ಇದ್ದರೆ ಎಂದರೆ ನಿಜ. ಈ ನನ್ನ ಸಹೋದರರು ಎಲ್ಲರೂ ಪ್ರತ್ಯೇಕವಾಗಿ ವಾಸ ಮಾಡುತ್ತಿದ್ದಾರೆ ಎಂದರೆ ನಿಜ. ನನ್ನು

ಸಹೋದರರು ಹೆಬ್ಬೆಟ್ಟು ಹಾಕಿದ್ದಾರೆ ಎಂದರೆ ನಿಜ. ಮನೆ ಮತ್ತು ಜಮೀನಗಳನ್ನು ಲಿಖಿತವಾಗಿ ವಿಭಾಗ ಮಾಡಿಕೊಂಡಿದ್ದೇವೆ ಎಂದರೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ಗೊತ್ತಿಲ್ಲ ಎಂದು ಹೇಳುತ್ತಾರೆ. ತಹಶೀಲ್ದಾರ್ ರವರು ಆದೇಶದ ವಿರುದ್ಧ ಮೇಲ್ಮನವಿ ಸಲ್ಲಿಸಿಲ್ಲ. ತಹಶೀಲ್ದಾರ್ ರವರು ಆದೇಶದ ಬಗ್ಗೆ ವಕೀಲರಿಗೆ ಮಾಹಿತಿ ಕೊಟ್ಟಿದ್ದೇವೆ. ದಾವಾ ಆಸ್ತಿಗಳನ್ನು ಖರೀದಿ ಮಾಡಿದ್ದ ದಾಖಲೆಗಳನ್ನು ಹಾಜರುಮಾಡಿಲ್ಲ ಮತ್ತು ನೋಡಿಲ್ಲ. ದಾವಾ ಆಸ್ತಿಗಳನ್ನು ಐಟಂ ನಂ. 2 ಅನ್ನು ನಮ್ಮ ತಂದೆಯೂ ಸಬಲಯ್ಯ ರವರಿಂದ ಕ್ರಯದ ಕರಾರುನ್ನು ಮಾಡಿಕೊಂಡಿರುತ್ತಾರೆ ಈ ಆಸ್ತಿಯಲ್ಲಿ ನಮ್ಮ ಮನೆಯವರು ಅನುಭವದಲ್ಲಿ ಇದ್ದಾರೆ ಎಂದರೆ ನಿಜ. ಇನ್ನೂ ಖಾತಾ ಬದಲಾವಣೆಯಾಗಿಲ್ಲ ಎಂದರೆ ಗೊತ್ತಿಲ್ಲ. ಸಬಲಯ್ಯ ತೀರಿಕೊಂಡಿರುತ್ತಾರೆ. ನನ್ನ ಸಹೋದರರು ಸಬಲಯ್ಯ ಮಕ್ಕಳ ಮೇಲೆ ದಾವಾ ಸಂಖ್ಯೆ: 32/2022 ಹಾಕಿದ್ದಾರೆ ಎಂದರೆ ನಿಜ. ದಾವಾ ಆಸ್ತಿಗಳನ್ನು ಐಟಂ ನಂ. 2 ಇನ್ನೂ ಭಾಗ ಆಗಬೇಕಿದೆಂದರೆ ನಿಜ.

ಸಮಯಾವಕಾಶ ಕೋರಿದ್ದರಿಂದ ಪಾಟೀ ಸವಾಲಿಗಾಗಿ ಮುಂದೂಡಲಾಯಿತು.

<u>ಮರುವಿಚಾರಣೆಃ ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಗಣಕೀಕರಣ ಮಾಡಲಾಯಿತು)**Na**

ಓ.ಹೇ.ಕೇ.ಸ.ಒ

(ವೆಂಕಟೇಶಪ್ಪ. ವಿ)
ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ.,ಚನ್ನಪಟ್ಟಣ.